**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.**

**ಸಿ.ಸಿ. ಸಂಃ 839/2019**

| | | |
|---|---|---|
| ಸಾಕ್ಷಿಯ ಹೆಸರುಃ | ಸಣ್ಣಮ್ಮ | ಪ್ರಾಸಾಃಃ 1 |
| ಗಂಡ ಹೆಸರುಃ | ವೇದಮೂರ್ತಿ | ಚಾಸಾಃಃ 2 |
| ವಯಸ್ಸುಃ | 39 ವರ್ಷ | ಪ್ರಮಾಣೀಕರಿಸಿದ<br>ದಿಃ 13/05/2024 |
| ಉದ್ಯೋಗಃ | ವ್ಯವಸಾಯ | |
| ವಾಸ ಸ್ಥಳಃ | ಪಾಕನಾಳ ಕೊಪ್ಪಲು ಗ್ರಾಮ,<br>ಪಿರಿಯಾಪಟ್ಟಣ ತಾ. | |

**ಮುಖ್ಯ ವಿಚಾರಣೆಃ** ಮಾನ್ಯ **ಸಸಅ ರಿಂದಃ**

2 ನೇ ಆರೋಪಿತ ನನ್ನ ಭಾವನ ಮಗ. ಮೃತ 1 ನೇ ಆರೋಪಿತ ನನ್ನ ಭಾವ. ಮೃತ ಚಾಸಾ-1 ನನ್ನ ಗಂಡ. ನನಗೆ ಚಾಸಾ-3 ರಿಂದ 5 ರವರ ಪರಿಚಯ ಇದೆ. ಅವರು ನಮ್ಮ ಗ್ರಾಮಸ್ಥರು. ನನಗೆ ಈ ಪ್ರಕರಣದ ಬಗ್ಗೆ ಏನೂ ಗೊತ್ತಿಲ್ಲ. ಆರೋಪಿತರು ಯಾವತ್ತೂ ಸಹ ನಮ್ಮೊಂದಿಗೆ ಜಗಳ ಮಾಡಿಲ್ಲ, ಮುಂದೆ ಹೋಗದಂತೆ ತಡೆಯುಂಟುಮಾಡಿಲ್ಲ, ದೊಣ್ಣೆಯಿಂದ ಮತ್ತು ಕೈಗಳಿಂದ ಹಲ್ಲೆ ಮಾಡಿಲ್ಲ, ಅವಮಾನ ಮಾಡಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ ಮತ್ತು ಕೊಲೆ ಬೆದರಿಕೆ ಹಾಕಿರುವುದಿಲ್ಲ. ಈ ಸಂಬಂಧ ಚಾಸಾ-1 ಆರೋಪಿತರ ವಿರುದ್ಧ ಯಾವುದೇ ದೂರು ನೀಡಿರುವುದಿಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ಸ್ಥಳ ಮಹಜರ್ ಕಾಲಕ್ಕೆ ನಾನು ಹಾಜರಿರಲಿಲ್ಲ ಮತ್ತು ಪೊಲೀಸರು ನನ್ನ ಸಮಕ್ಷಮ ಯಾವುದೇ ವಸ್ತುವನ್ನು ಅಮಾನತ್ತು ಪಡಿಸಿಕೊಂಡಿಲ್ಲ. ಸಾಕ್ಷಿಯು ಸ್ಥಳ ಮಹಜರ್ ನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿ.ಪಿ.1** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು

**ನಿ.ಪಿ.1(ಎ)** ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ನಾನು ಖಾಲಿ ಹಾಳೆಯ ಮೇಲೆ ಪೊಲೀಸರ ಒತ್ತಾಯಕ್ಕೆ ಹಾಕಿರುತ್ತೇನೆ. ನಾನು ನ್ಯಾಯಾಧೀಶರ ಮುಂದೆ ಪೊಲೀಸರ ಒತ್ತಾಯದ ಮೇರೆಗೆ ಹೇಳಿಕೆ ನೀಡಿರುತ್ತೇನೆ.

(**ಈ ಸಮಯದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರುತ್ತಾರೆ. ಕಡತವನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.**)

**ಪಾಟೀ ಸವಾಲುಃ ಮಾನ್ಯ ಸಸಅ ರವರಿಂದಃ**

ಈಗ ನನಗೆ ಓದಿ ಹೇಳಿದಂತೆ ''ದಿನಾಂಕಃ 04/05/2018 ರಂದು ............................ ಈ ಮಹಜರ್ ನ್ನು ಬೆಳಿಗ್ಗೆ 9.00 ಗಂಟೆಯಿಂದ 10.00 ಗಂಟೆಯವರೆಗೆ ಬರೆಯಲಾಯ್ತು'' ಎಂದು ನಿಪಿ.1 ರಂತೆ ಮಹಜರ್ ಕ್ರಮ ಜರುಗಿಸಲಾಯಿತು ಎಂದರೆ ಸರಿಯಲ್ಲ. ಸದರಿ ಮಹಜರ್ ಗೆ ನಾನು ಸ್ಥಳದಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಈಗ ನನಗೆ ಓದಿ ಹೇಳಿದಂತೆ '' ನಾನು ಮೇಲ್ಕಂಡ ವಿಳಾಸದಲ್ಲಿ ...................... ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತೇನೆ.'' ಎಂದು ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಹೇಳಿಕೆಯನ್ನು **ನಿಪಿ.2** ಎಂದು ಗುರುತಿಸಲಾಯಿತು.

ಈಗ ನನಗೆ ಓದಿ ಹೇಳಿದಂತೆ '' ನನ್ನ ಭಾವ ವೀರಭದ್ರ ...................... ಪ್ರಾಣ ಬೆದರಿಕೆ ಹಾಕಿರುತ್ತಾರೆ.'' ಎಂದು ನ್ಯಾಯಾಧೀಶರ ಮುಂದೆ ಪೊಲೀಸರ ಒತ್ತಾಯದ ಮೇರೆಗೆ ಹೇಳಿಕೆ ನೀಡಿದ್ದೇನೆ. ಸಾಕ್ಷಿಯ ಹೇಳಿಕೆಯನ್ನು **ನಿಪಿ.3** ಎಂದು ಗುರುತಿಸಲಾಯಿತು. ನಾನು ಆರೋಪಿತರೊಂದಿಗೆ ರಾಜೀ ಮಾಡಿಕೊಂಡಿರುತ್ತೇನೆ ಎಂದರೆ ಸರಿ. ಆದ್ದರಿಂದ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು: ಆರೋಪಿತರ ಪರ ವಕೀಲರಿಂದಃ</u>**

ಇಲ್ಲ.

**ಮರು ವಿಚಾರಣೆಃ** ಇಲ್ಲ.

**<u>ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು</u>**

**<u>ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.</u>**

**ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.,**

**ಪಿರಿಯಾಪಟ್ಟಣ.**